ಭಾನುವಾರ
01/06/2025
ಬದುಕು ಪುರಾಣ



ನಾ ಕಾರಂತ ಪೆರಾಜೆ

THE RURAL MIRROR.com Constructive Media
WWW.THERURALMIRROR.COM
ದ ರೂರಲ್ ಮಿರರ್.ಕಾಂ
Constructive Media

# ಶ್ರೀಮಂತಿಕೆ 'ಪಾಸ್ ಬುಕ್ಕಿನಲ್ಲಿ' ಇರುವುದಲ್ಲ!

'ಸ್ವರ್ಗ' ಅಂದರೆ ಸಂಪತ್ತಿನ ಅನುಭವ ಎನ್ನೋಣ. ಇದರ ಸವಿಯನ್ನುಂಡವ 'ಸ್ವರ್ಗಸುಖಿ'. ಆಡುಮಾತಿನಲ್ಲಿ 'ಉಳ್ಳವರು'. ಸಂಪತ್ತು ಅಂದರೆ ಲಕ್ಷ್ಮೀಯ ಆವಾಸ ಸ್ಥಾನ. ಲಕ್ಷ್ಮಿಯನ್ನು ಆರಾಧಿಸದೆ ಅದೃಷ್ಟ ಬಾರದು. ಆರಾಧನೆ ಅಂದರೆ ಪೂಜೆ, ಹೋಮ, ಹವನಾದಿಗಳು ಅಲ್ಲ. ಅವಳ ಕುರಿತಾದ ಗೌರವ. 'ಹಣ ಚೆಲ್ಲುವುದು', 'ನನ್ನಲ್ಲಿ ಹಣವಿದೆ' ಎಂದು ಪೋಸ್ ಕೊಡುವುದು ಶ್ರೀಮಂತಿಕೆಯಲ್ಲ. ಹತ್ತು ಮಂದಿಯ ಕಣ್ಣೀರು ಒರೆಸಿದರೆ, ಹತ್ತಾರು ಮಂದಿಯ ಹೊಟ್ಟೆ ತಂಪು ಮಾಡಿದರೆ ಇದಕ್ಕೆ ಮಿಗಿಲಾದ ಶ್ರೀಮಂತಿಕೆ ಯಾವುದಿದೆ?

ಪಾಸ್ ಬುಕ್ಕಿನಲ್ಲಿ ಹಣವಿದ್ದ ಮಾತ್ರಕ್ಕೆ ಆತ ಶ್ರೀಮಂತನಾಗಲಾರ. ಪಾಸ್‌ಬುಕ್ ಎಲ್ಲರಲ್ಲೂ ಇದೆ. ಅಲ್ಲಿರುವ ಠೇವಣಿಯ ಲೆಕ್ಕಣಿಕೆಯಲ್ಲಿ ವ್ಯತ್ಯಾಸವಿರಬಹುದಷ್ಟೇ. ಈಚೆಗೊಬ್ಬರು ಹೇಳಿದುದನ್ನು ಕೇಳಿದೆ. "ಅವರು ಭಯಂಕರ ಮಾರಾಯ್ರೆ. ಅವರ ಪಾಸ್ ಬುಕ್ ಗಟ್ಟಿ ಇದೆ." ಸರಿ, ಭಯಂಕರ ಅಂದ್ರೆ ಏನು? ಎಷ್ಟೋ ಘಟನೆಗಳಿಗೆ ಹೊಂದದ ಪದಗಳನ್ನು ಟಂಕಿಸುತ್ತೇವೆ. ಅದು ವಾಹಿನಿಗಳ ಕೊಡುಗೆ! ಅವರವರ ಪಾಸ್ ಬುಕ್ ಅವರವರ ತಿಜೋರಿಯಲ್ಲಿರಲಿ.

ಬದುಕಿನಲ್ಲಿ ಬಳಸುವ 'ಸ್ವರ್ಗ' ಪದವು ಶ್ರೀಮಂತಿಕೆಯ ದ್ಯೋತಕ. ಆದರೆ ಅದು ಯಾವ ತರಹದ ಶ್ರೀಮಂತಿಕೆ? ಆರ್ಥಿಕ ಶ್ರೀಮಂತಿಕೆ, ಹೃದಯ ಶ್ರೀಮಂತಿಕೆ, ಸಜ್ಜನಿಕೆಯ ಶ್ರೀಮಂತಿಕೆ.. ಹೀಗೆ. ಕೋಟಿಗಟ್ಟಲೆ ಹಣವಿದ್ದರೆ ಏನಂತೆ? ಸಜ್ಜನಿಕೆ ಇಲ್ಲದಿದ್ದರೆ? ಹಿಂದೊಮ್ಮೆ ಶೇರ್ ವ್ಯವಹಾರದ ಹಿನ್ನೆಲೆಯಲ್ಲಿ ಹಿರಿಯರೊಬ್ಬರ ಮಾತು ನೆನಪಾಗುತ್ತದೆ. "ರಾಶಿ ರಾಶಿ ಹಣ ಬರ್ತದೆ. ಗೋಣಿಯಲ್ಲಿ ಕಟ್ಟಿಟ್ಟರೂ ಮುಗಿಯುವುದಿಲ್ಲ."! ಇದು ಉತ್ಪ್ರೇಕ್ಷೆಯಾಗಿರಲೂ ಬಹುದು. ಗೋಣಿಯಲ್ಲಿ ಕಟ್ಟಿಡುವುದು ನೋಟಿನ ಕಂತೆಗಳನ್ನು ಅಲ್ವಾ. ಅಲ್ಲಿ ಸಜ್ಜನಿಕೆಯ ಕಂತೆ ಇದೆಯಾ? ಲಕ್ಷ್ಮಿಯ ಕುರಿತಾದ ಗೌರವ ಭಾವ ಇದೆಯಾ? ಈ ಪ್ರಶ್ನೆಗಳಿಗೆ ಉತ್ತರವಿಲ್ಲ. ಇವರಲ್ಲಿ 'ಸ್ವರ್ಗ ಕಾಣಿಸುವಷ್ಟು' ಸಂಪತ್ತಿತ್ತು. ಆದರೆ 'ಸ್ವರ್ಗ' ಕಾಣಿಸುತ್ತಿಲ್ಲ. ಕೊನೆಗೆ ಸ್ವರ್ಗಸ್ಥರಾದರು ಬಿಡಿ.

ಇನ್ನೊಂದು ಪದ 'ಸ್ವರ್ಗಕ್ಕೆ ಸೋಪಾನ'. ಅಂದರೆ ಶ್ರೀಮಂತಿಕೆಯೆಡೆಗೆ ಸಾಗುತ್ತಿದ್ದಾನೆ ಎಂದು ಊಹಿಸೋಣ. ಬದುಕಿನಲ್ಲಿ ಕಷ್ಟಪಟ್ಟು ದುಡಿದು, ಸಂಪಾದಿಸಿ ಸಂಪತ್ತಿನ ಒಂದೊಂದೇ ಮೆಟ್ಟಿಲನ್ನು ಏರಿ, ಯಶ ಕಾಣುತ್ತಾನೆ. ಹೀಗೆ ಬಡತನದಿಂದ ಮೇಲೆದ್ದು ಬಂದವನಲ್ಲಿ ಸಜ್ಜನಿಕೆಯಿರುತ್ತದೆ, ಹೃದಯ ಶ್ರೀಮಂತಿಕೆಯಿರುತ್ತದೆ, ಪಾಪ-ಪುಣ್ಯಗಳ ಸಂಪತ್ತಿರುತ್ತದೆ. ಏರಿ ಬಂದ ಬದುಕಿನ ಏಣಿಯ ಮೆಟ್ಟಿಲನ್ನು ನೆನಪಿಟ್ಟುಕೊಂಡಿರುತ್ತಾನೆ. ಈ ಯಾನದಲ್ಲಿ ಆತ ಪ್ರತಿ ಹಂತದಲ್ಲಿ 'ಸ್ವರ್ಗ' ಅಂದರೆ ತೃಪ್ತಿಯನ್ನು ಅನುಭವಿಸುತ್ತಿರುತ್ತಾನೆ. ಒಂದರ್ಥದಲ್ಲಿ 'ತೃಪ್ತಿ'ಯೇ ಶ್ರೀಮಂತಿಕೆ. ಕೋಟಿಗಟ್ಟಲೆ ಹಣವಿದ್ದೂ ತೃಪ್ತಿಯ ಭಾವದ ಇಲ್ಲದಿದ್ದರೆ?



ಶ್ರೀಮಂತಿಕೆಯು ಬದುಕಿಗೆ 'ಅಮಲು' ಆಗಕೂಡದು! ಅದು ಸಂಪತ್ತಿನ ಅಮಲು. ಬುದ್ಧಿಯ ಅಮಲು. ತಾನೇನು ಮಾಡುತ್ತಿದ್ದೇನೆ ಎಂದು ಊಹಿಸಲು ಕೂಡಾ ಕಷ್ಟವಾಗುವಂತಹ ಅಮಲು. ಮದ್ಯಪಾನದಿಂದ ಮಾತ್ರ ಅಮಲುಂಟಾಗುವುದಿಲ್ಲ. ಒಮ್ಮೆ ಹೀಗಾಯಿತು. ಮಂಗಳೂರಿಗೆ ಹೊರಟಿದ್ದೆ. ಪರಿಚಿತರೊಬ್ಬರ ಕಾರು ನಿಂತಿತು. 'ಬನ್ನಿ, ಬಸ್‌ಸ್ಟಾಂಡ್ ತನಕ ಡ್ರಾಪ್ ಕೊಡ್ತೇನೆ' ಎಂದರು. ಹಲವು ಲಕ್ಷ ರೂಪಾಯಿಗಳ ಐಷರಾಮಿ ಕಾರು! 'ನಾನು ಮಂಗಳೂರಿಗೆ' ಎಂದಾಗ, 'ನಾನೂ ಮಂಗಳೂರಿಗೆ. ಮಾತನಾಡುತ್ತಾ ಹೋಗೋಣ' ಎಂದರು. ಸರಿ, ಲೋಕದ ಸುದ್ದಿ, ರಾಜಕೀಯ, ಬಡತನ.. ಹೀಗೆ ಹತ್ತಾರು ವಿಷಯಗಳ ಪೋಸ್ಟ್‌ಮಾರ್ಟಂ ಮಾಡುತ್ತಿದ್ದರು.. ಅವರಲ್ಲಿ ಬಡತನದ ಕುರಿತು ಅನಾದರವಿತ್ತು. "ನೋಡಿ, ಈ ಕಾರಿಗೆ ಇಪ್ಪತ್ತಾರು ಲಕ್ಷ ರೂಪಾಯಿ ನೀಡಿದ್ದೇನೆ. ಇದರಲ್ಲಿ ಕುಳಿತುಕೊಳ್ಳುವುದಕ್ಕೆ ಯೋಗ ಬೇಡ್ವಾ. ಬಡವರಿಗೆ ಸಾಧ್ಯವಾ" ಅಂದಾಗ ಅಂತರಾತ್ಮ ಚುಚ್ಚಿತು.
ಹೌದಲ್ವಾ.. ಇಷ್ಟು ದೊಡ್ಡ ಮೊತ್ತದ ಕಾರು ಖರೀದಿಸಲು ಬಡವರಿಗೆ ಸಾಧ್ಯವಿಲ್ಲ. ಅದರ ಅಗತ್ಯವೂ ಇಲ್ಲ. ಖರೀದಿಸುವುದು ಬಿಡಿ, ಕುಳಿತುಕೊಳ್ಳಲು ಯೋಗ, ಯೋಗ್ಯತೆ ಬೇಡವೇ? ಅಂತರಾತ್ಮ ಹೇಳಿತು, 'ಕಾರಿನಿಂದ ಇಳಿ'! ಇಷ್ಟೆಲ್ಲಾ ಮಾತುಕತೆ ಆಗುವಾಗ ಕಲ್ಮಡ್ಕ ದಾಟಿ ಮೇಲ್ಕಾರು ಸನಿಹ ಬಂದಿದ್ದೆವು. 'ನಾನು ಇಳಿಯುತ್ತೇನೆ. ಸ್ವಲ್ಪ ಕೆಲಸವಿದೆ' ಎಂದು ಸಬೂಬು ಹೇಳಿ ಅವರಿಂದ ಕಳಚಿಕೊಂಡೆ. ಅವರ ಮಾತುಕತೆಯಲ್ಲಿ ಹೇಳುವಂತಹ ತೀಕ್ಷ್ಣತೆ ಕಾಣದಿದ್ದರೂ, ಶ್ರೀಮಂತಿಕೆಯ ಅಮಲು ಪ್ರಕಟವಾಗುತ್ತಿತ್ತು. ಆದರೆ ಅಮಲಿನ ಪರಾಕಾಷ್ಠೆಯ ಮತ್ತೊಂದು ರೂಪ 'ಧಿಮಾಕು' ಕಾಣಲಿಲ್ಲ!
ಇನ್ನೊಂದು ಪ್ರಕರಣ ಹೇಳಲೇ ಬೇಕು.

ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದೆ. ಜಿಟಿಜಿಟಿ ಮಳೆ. ಪ್ರತಿಷ್ಠಿತರೊಬ್ಬರ ಪಿತಾಶ್ರೀ "ಬನ್ನಿ, ನಾವು ಹೇಗೂ ಪುತ್ತೂರಿಗೆ ಹೋಗುವವರು. ಮಾತನಾಡುತ್ತಾ ಹೋಗೋಣ." ಎಂದರು. ಒಂದೈದು ನಿಮಿಷ ಆಗಿತ್ತಷ್ಟೇ. ಚಾಲಕನ ಆಸನದಲ್ಲಿದ್ದ ಅವರ ಪುತ್ರ ಮಹಾಶಯರ ಅಸಹನೆ ಶುರುವಾಗಿತ್ತು. "ನಿಮಗೆ ಹೇಳಿಲ್ವಾ. ಯಾರನ್ನೂ ಹತ್ತಿಸಬಾರದು. ಮೊನ್ನೆಯಷ್ಟೇ ಸರ್ವೀಸ್ ಮಾಡಿದ್ದು. ಧೂಳು, ಕೆಸರು ಪುನಃ ಆಯಿತಾದರೆ ಕ್ಲೀನ್ ಮಾಡುವವರು ಯಾರು. ಈ ಕಾರಿಗೆ ಎಷ್ಟು ಬೆಲೆ ಗೊತ್ತುಂಟಾ." ಹೀಗೆ ತನ್ನ ಜನ್ಮದಾತರಿಗೆ ಗೊಣಗಾಟಗಳ ಸುರಿಮಳೆ. ಪಾಪ, ಅವರು ಮಗನಿಂದಾದ ಅಪಮಾನದಿಂದ ಮುದ್ದೆಯಾಗಿದ್ದರು. ತಲೆ ಕೆಳಗೆ ಹಾಕಿ ಕುಳಿತರು. ಅವರ ಲಕ್ಷ ರೂಪಾಯಿ ಸುರಿದ ಕಾರು ಅಂದು ಪರಿಚಯ, ಸಂಬಂಧಗಳ ತೇವವನ್ನು ಆರಿಸಿತ್ತು! ಆ ಹಿರಿಯರ ಮೇಲಿನ ಗೌರವದಿಂದ ಹೇಗೋ ಸಹಿಸಿಕೊಂಡೆ. ನಂತರ ಒಂದೆರಡು ಬಾರಿ ಸಂದರ್ಭ ಬಂದರೂ ಅವರ ಕಾರಿನಲ್ಲಿ ಪ್ರಯಾಣಿಸಲಿಲ್ಲ. ಇದು ಶ್ರೀಮಂತಿಕೆಯ ಅಮಲಿನ ಚಿಕ್ಕ ಉದಾಹರಣೆ.

**ಸಂಪೂರ್ಣ ಓದಿಗೆ....**
**www.theruralmirror.com ಕ್ಲಿಕ್ ಮಾಡಿರಿ ಅಥವಾ ಇಲ್ಲಿ Scan ಮಾಡಿರಿ**

ನಮ್ಮ ಚಾನೆಲ್ ಫಾಲೋ ಮಾಡಲು